ಸೂಳ್ಯ ತಾಲ್ಲೂಕಿನ ಮಾರ್ಗಪಾಣಿ ಎಂಬಲ್ಲಿ ಸೇತುವೆ ಕಾಮಗಾರಿ

1004 (1453) ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಬಂಟ್ವಾಳ ರಾಜ್ಯ ಹೆದ್ದಾರಿಯ ಸುಳ್ಯ ತಾಲ್ಲೂಕಿನ ಮಾರ್ಗಪಾಣಿ ಎಂಬಲ್ಲಿ ಯಾವ ಯೋಜನೆಯಲ್ಲಿ ಸೇತುವೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ; ಇದರ ಅಂದಾಜು ವೆಚ್ಚದ ಪೂರ್ತಿ ವಿವರ ನೀಡುವುದು.

ಆ) ಸದರಿ ಸೇತುವೆ ಕಾಮಗಾರಿಯ ಗುತ್ತಿಗೆಯನ್ನು ಯಾರಿಗೆ ನೀಡಲಾಗಿದೆ; ಎಷ್ಟು ಸಮಯದಲ್ಲಿ ಪೂರ್ಣಗೊಳಿಸಲಾಗುವುದು

ಇ) ಗುತ್ತಿಗೆಯನ್ನು ಪಡೆದುಕೊಂಡ ವ್ಯಕ್ತಿ ಕೆಲಸವನ್ನು ಮಾಡದೆ ಬೇರೆಯವರಿಗೆ ಸಬ್ ಗುತ್ತಿಗೆ ನೀಡಿದ್ದು ಸಬ್ ಗುತ್ತಿಗೆದಾರ ಕಳಪೆ ಮಟ್ಟದಲ್ಲಿ ಕಾಮಗಾರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಹುಡ್ಕೋ ನೆರವಿನ ಯೋಜನೆಯಡಿಯಲ್ಲಿ ಈ ಸೇತುವೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಇದರ ಅಂದಾಜು ವೆಚ್ಚ ರೂ. 77.75 ಲಕ್ಷ.

ಆ) ಸದರಿ ಸೇತುವೆ ಕಾಮಗಾರಿಯ ಗುತ್ತಿಗೆಯನ್ನು ಮೆ॥ ಮೆಕ್ಕಾನ್ ಲಿಮಿಟೆಡ್ (ಭಾರತ ಸರ್ಕಾರದ ಒಂದು ಉದ್ಯಮ) ಇವರಿಗೆ ಒಪ್ಪಿಸಲಾಗಿದೆ. 2001ನೇ ಸಲಿನ ಸೆಪ್ಟೆಂಬರ್ ಅಂತ್ಯದಲ್ಲಿ ಪೂರ್ಣಗೊಳಿಸಲಾಗುವುದು.

ಇ) ಸದರಿ ಕಾಮಗಾರಿಯ ಗುಣಮಟ್ಟದ ಬಗ್ಗೆ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ಮೆ॥ ಮೆಕ್ಕಾನ್ ರವರಿಗೆ ತಿಳಿಸಲಾಗಿದೆ. ಈ ಕೆಲಸದಲ್ಲಿ ಸಬ್ ಗುತ್ತಿಗೆದಾರರು ಇರುವುದಿಲ್ಲ. ಮೆ॥ ಮೆಕ್ಕಾನ್ ಲಿಮಿಟೆಡ್ ರವರು ಕಾಮಗಾರಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಅನುಮೋದನೆ ಪಡೆದು ಮೆ॥ ಗ್ಯಾಮನ್ ಇಂಡಿಯಾ ಲಿಮಿಟೆಡ್ ರವರಿಗೆ ನಿರ್ಮಾಣದ ಕಾರ್ಯವನ್ನು ನೀಡಿರುತ್ತಾರೆ. ಇದರ ಸಿವಿಲ್ ಕಾಮಗಾರಿಯ ಮೇಲ್ವಿಚಾರಣೆ ಮತ್ತು ಕಾಮಗಾರಿಯ ಗುಣಮಟ್ಟದ ಬಗ್ಗೆ ಮೆ॥ ಮೆಕ್ಕಾನ್ ಲಿಮಿಟೆಡ್ ರವರ ಜವಾಬ್ದಾರಿ ಆಗಿರುತ್ತದೆ. ಇದರ ಬಗ್ಗೆ ಈಗಾಗಲೇ ಮೆ॥ ಮೆಕ್ಕಾನ್ ರವರಿಂದ ವರದಿ ಪಡೆದು, ಕೆಲಸಕ್ಕೆ ಬೇಕಾದ ಯಂತ್ರ ಸಾಮಗ್ರಿಗಳನ್ನು ಸಣ್ಣ ಪುಟ್ಟ ಸಿವಿಲ್ ಕಾಮಗಾರಿಗೆ ಬೇಕಾದ ಕೂಲಿ ಆಳುಗಳ ಬಾಡಿಗೆಯನ್ನು ಮೆ॥ ಗ್ಯಾಮನ್ ಇಂಡಿಯಾ ಲಿಮಿಟೆಡ್ ಇಂಜಿನಿಯರುಗಳ ಉಪಸ್ಥಿತಿಯಲ್ಲಿ ಪಡೆಯಲಾಗಿದೆ.

ಈ) ಈ ಕಾಮಗಾರಿಯ ಗುಣಮಟ್ಟದ ಬಗ್ಗೆ ಕರ್ನಾಟಕ ರೀಜನಲ್ ಇಂಜಿನಿಯರಿಂದ

ಕಾಲೇಜ್, ಸೂರತ್‌ಕಲ್‌ರವರಿಂದ ವರದಿ ತರಿಸಿದ್ದು, ತಳಪಾಯದ ಕಾಂಕ್ರೀಟ್ ಸರಿ ಇದೆ ಎಂದು ತಿಳಿಸಿರುತ್ತಾರೆ, ಟಾರ್ ಸ್ಟೀಲ್ ರಿಸರ್ಚ್‌ರವರಿಂದ ನಾನ್ ಡ್ಯಿಟೀವ್ ಪರೀಕ್ಷೆಯನ್ನು ಮಾಡಲು ಮೆ॥ ಮೆಕ್ಕಾನ್‌ರವರು ಈಗಾಗಲೇ ಕ್ರಮ ತೆಗೆದುಕೊಂಡಿರುತ್ತಾರೆ.

ಸುಳ್ಯ ತಾಲ್ಲೂಕಿನ ಎಲಿಮಲೆ ಅರಂತೋಡು ರಸ್ತೆಯ ಡಾಂಬರೀಕರಣ

1005 (1455) ಶ್ರೀ ಎಸ್. ಅಂಗರ (ಸುಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕಿನ ಎಲಿಮಲೆ ಅರಂತೋಡು ರಸ್ತೆಯ ಕಿ.ಮೀ. 1.45 ರಿಂದ 8.75 ವರೆಗೆ ನಬಾರ್ಡ್ ಯೋಜನೆಯಲ್ಲಿ ಸೇರಿದ್ದು ಡಾಂಬರೀಕರಣ ಮಂಜೂರಾತಿ ನೀಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ ಎಷ್ಟು ಸಮಯದಲ್ಲಿ ಕ್ರಮ ಕೈಗೊಳ್ಳಲಾಗುವುದು: ವಿವರ ನೀಡುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಈ ಕಾಮಗಾರಿಯು ನಬಾರ್ಡ್‌ನಿಂದ 98-99ರಲ್ಲಿ ರೂ 36.45 ಲಕ್ಷಗಳಿಗೆ ಅನುಮೋದನೆಯಾಗಿರುತ್ತದೆ. ಸದರಿ ಕಾಮಗಾರಿಗೆ ನಾಲ್ಕು ಬಾರಿ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ದರಗಳು ಬಹಳ ಹೆಚ್ಚಿರುವುದರಿಂದ ತಿರಸ್ಕರಿಸಲಾಗಿದೆ.

ಆ) ಸದರಿ ಕಾಮಗಾರಿಯ ಅಂದಾಜನ್ನು ಪರಿಷ್ಕರಿಸುವ ಅವಶ್ಯಕತೆ ಇದ್ದು, ಇದನ್ನು ಪ್ರಸ್ತುತ ಕೈಗೊಳ್ಳಲು ಸಾಧ್ಯವಿಲ್ಲದ ಕಾರಣ ಈ ಕಾಮಗಾರಿಯನ್ನು ಕೈಬಿಡಲು ಯೋಜಿಸಲಾಗಿದೆ. ಈ ಕಾಮಗಾರಿಗೆ ಅಂದಾಜನ್ನು ಪರಿಷ್ಕರಿಸಿ ಮುಂದಿನ ಸಲಿನಲ್ಲಿ ಹೊಸ ಕಾಮಗಾರಿಗಳನ್ನು ಗುರುತಿಸುವಾಗ ಪರಿಗಣಿಸಲಾಗುವುದು.

ಸುಳ್ಯ-ಸುಬ್ರಮಣ್ಯ ನೋಣಂಗೇರಿ ಕ್ಯೂಕುಳಿ ಸೇತುವೆ ಬಿರುಕು ಬಿಟ್ಟಿರುವ ವಿಚಾರ

1006 (1457) ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕು, ಸುಳ್ಯ-ಸುಬ್ರಹ್ಮಣ್ಯ ರಸ್ತೆಯ ನೋಣಂಗೇರಿ, ಕ್ಯೂಕುಳಿ ಎಂಬಲ್ಲಿ ಹಳೆಯ ಮುಳುಗು ಸೇತುವೆ ಇದ್ದು ಮಳೆಗಾಲದಲ್ಲಿ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಇತ್ತು ಬಿರುಕು ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಸುಳ್ಯ ತಾಲ್ಲೂಕಿನ ಜಾಲ್ಸೂರು-ಸುಬ್ರಹ್ಮಣ್ಯ ಜಿಲ್ಲಾ ಮುಖ್ಯ ರಸ್ತೆಯ ಕಿ.ಮೀ. 7.40 ರಲ್ಲಿ ನೋಣಂಗೇರಿ ಎಂಬಲ್ಲಿ ಹಾಗೂ ಕಿ.ಮೀ. 10.60ರಲ್ಲಿ ಕ್ಯೂಕುಳಿ ಎಂಬಲ್ಲಿ ಎರಡು ಮುಳುಗು